**ಎಂ.ವಿ.ಸಿ ನಂ. 374/2022**
**RW-2**

(ಇಂದು ದಿನಾಂಕಃ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆ 2 ನೇ ಅರ್ಜಿದಾರರ ಪರ ಶ್ರೀ VRM. ವಕೀಲರಿಂದ:</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ಈ ಅರ್ಜಿಯಲ್ಲಿ ಸಾಕ್ಷಿ ನುಡಿಯಲು 2 ನೇ ಎದುರುದಾರ ಕಂಪನಿಯವರು ನೀಡಿರುವ ಅಧಿಕಾರ ಪತ್ರವನ್ನು ನಿ.ಆರ್-4 ಎಂದು, ವಿಮಾ ಪಾಲಿಸಿಯನ್ನು ನಿ.ಆರ್-5 ಎಂದು ಗುರುತಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ ಇಲ್ಲಃ</u>**

**<u>ಪಾಟೀ ಸವಾಲು ಅರ್ಜಿದಾರ ಪರ NHR ವಕೀಲರಿಂದಃ</u>**

ಗಾಯದ ಪ್ರಮಾಣ ಪತ್ರ ನೋಡಿದ್ದೇನೆ. ಗಾಯದ ಪ್ರಮಾಣ ಪತ್ರದಲ್ಲಿ RTA ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದರಲ್ಲಿ ವಾಹನ ನಂಬರ ಇಲ್ಲ ಎಂದು ಹೇಳುತ್ತಾರೆ. ಯಾವುದೇ ಗಾಯದ ಪ್ರಮಾಣ ಪತ್ರಗಳಲ್ಲಿ ವಾಹನದ ನಂಬರ ಉಲ್ಲೇಖ ಮಾಡುವುದಿಲ್ಲ ಎಂದರೆ ಸರಿಯಲ್ಲ. ವಿಳಂಬದ ಬಗ್ಗೆ ದೂರು ಮತ್ತು FIR ನಲ್ಲಿ ವಿವರಿಸಲಾಗಿದೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಪರಿಹಾರ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದ ದಿನವೇ MLC ಆಗಿದ್ದು ಅದನ್ನು ಪೋಲೀಸರಿಗೆ ನೀಡಿದ್ದು ಅದನ್ನು ನೋಡಿ ಪೋಲೀಸರು ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಅಪಘಾತ KA 32 EX 4977 ರ ಸವಾರನ ತಪ್ಪಿನಿಂದ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದೆರೆ ಸರಿಯಲ್ಲ. ಪರಿಹಾರ ನೀಡಲು ನಮ್ಮ ಕಂಪನಿ ಜವಾಬ್ದಾರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.